**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ 10006/2023**

**ಪಿರ್ಯಾದುದಾರರು** : ಸೊರಬ ಪೊಲೀಸ್ ಠಾಣೆ

ವಿರುದ್ಧ

**ಆರೋಪಿತರು** :

1) ಅರುಣ ಬಿನ್ ಛತ್ರಪತಿ,
ವಯಸ್ಸು ಸುಮಾರು 25 ವರ್ಷ,
ಕೂಲಿ ಕೆಲಸ,
ವಾಸಃ ಯಲಸಿ ಗ್ರಾಮ,
ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

2) ಛತ್ರಪತಿ ಬಿನ್ ಮಂಡಕ್ಕಿ ಹುಚ್ಚಪ್ಪ,
ವಯಸ್ಸು ಸುಮಾರು 51 ವರ್ಷ,
ವೃತ್ತಿಃ ವ್ಯವಸಾಯ,
ವಾಸಃ ಯಲಸಿ ಗ್ರಾಮ,
ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತರ ಹೇಳಿಕೆ</u>

ಪ್ರ.1 ಅಭಿಯೋಜನೆಯ ಪರ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿರುತ್ತೀರಾ?

ಉಃ

ಪ್ರಃ2 ಫ್ರಾ.ಸಾ.1 ಮಾಲತೇಶ ರವರು ತಮ್ಮ ಸಾಕ್ಷ್ಯದಲ್ಲಿ – ನಮ್ಮ ಮನೆಯವರಿಗೆ ಮತ್ತು ಆರೋಪಿತರ ಮನೆಯವರಿಗೆ ಜಾಗದ ವಿಚಾರದಲ್ಲಿ ವೈಮನಸ್ಸು ಇದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 3 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ದಿನಾಂಕಃ 06–03–2022 ರಂದು ಸಂಜೆ ಸುಮಾರು 5–00 ಗಂಟೆ ಸಮಯದಲ್ಲಿ ನಮ್ಮ ಮನೆಯವರೆಲ್ಲರೂ ಅವರವರ ಕೆಲಸದಲ್ಲಿ ತೊಡಗಿಕೊಂಡಿದ್ದು ಚಾಸಾ3 ರವರು ಮನೆಯ ಹಿಂಭಾಗ ಸಗಣಿ ಸಾರಿಸುತ್ತಿದ್ದರು, ಆಗ 1 ನೇ ಆರೋಪಿಯು ಅಲ್ಲಿಗೆ ಬಂದು ಇದು ನಮ್ಮ ಜಾಗ ಇಲ್ಲಿ ಯಾಕೆ ಸಗಣಿ ಸಾರಿಸುತ್ತಿದ್ದೀಯಾ, ಸೂಳೆ ಮುಂಡೆ , ಬೋಳಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಚಾಸಾ3 ರವರಿಗೆ ಬೈದನು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ4 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಂತರ ಬೈದದ್ದನ್ನು ಕೇಳಿಸಿಕೊಂಡು ನಾನು ಅಲ್ಲಿಗೆ ಬಂದು ಯಾಕೆ ಚಸಾ3 ರವರನ್ನು ಬೈಯ್ಯುತ್ತಿದ್ದಿಯಾ ಎಂದು ಕೇಳಿದಾಗ 1 ನೇ ಆರೋಪಿಯು ನೀನು ಯಾವನೋ ಕೇಳುವುದಕ್ಕೆ ಎಂದು ಬಂದು ಕೈಯಿಂದ ನನ್ನ ಮೈಮೇಲೆ ಹೊಡೆದಿರುತ್ತಾನೆ, ಆಗ ಚಾಸಾ2 ರವರು ಜಗಳವನ್ನು ಬಿಡಿಸಲು ಬಂದಿದ್ದು ಆಗ 1 ನೇ ಆರೋಪಿಯ ತಂದೆ 2 ನೇ ಆರೋಪಿ ಬಂದು ನಮ್ಮನ್ನು

ದೂಡಿ ಕೆಡವಿ 2 ನೇ ಆರೋಪಿಯು ನನ್ನ ತಂದೆಗೆ ಕೈಯಿಂದ ಹೊಡೆದಿರುತ್ತಾನೆ, ಅದಾದ ನಂತರ 1 ನೇ ಆರೋಪಿಯು ಅಲ್ಲೇ ಪಕ್ಕದಲ್ಲಿ ಇದ್ದ ಕಂದಿಲಿಯನ್ನು ತೆಗೆದುಕೊಂಡು ನನ್ನ ತಲೆಯ ಎಡಭಾಗಕ್ಕೆ ಹೊಡೆದಿರುತ್ತಾನೆ, ಆಗ ನನ್ನ ತಲೆಯ ಎಡಭಾಗ ಓಪನ್ ಆಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 5 ಪ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ಆಗ ಚಾಸಾ2 ರವರು ನನ್ನನ್ನು ಬಿಡಿಸಲು ಬಂದಿದ್ದು ಆಗ 1 ನೇ ಆರೋಪಿ ಚಾಸಾ2 ರವರ ಕುತ್ತಿಗೆಯ ಎಡಭಾಗ ಮತ್ತು ಭುಜಕ್ಕೆ ಅದೇ ಕಂದ್ಲಿಯಿಂದ ಹಲ್ಲೆ ಮಾಡಿರುತ್ತಾನೆ, ಆಗ ನನಗೆ ಹೊಡೆತ ಬಿದ್ದಿದ್ದರಿಂದ ನಾನು ಸುಮ್ಮನೆ ಇದ್ದೆನು, ಆಗ ಚಾಸಾ3 , ಪ್ರಾಸಾ5 ಮತ್ತು ಪ್ರಾಸಾ6 ರವರು ಬಂದು ಜಗಳ ಬಿಡಿಸಿದರು, ನಂತರ 1 ನೇ ಆರೋಪಿ ಕಂದ್ಲಿಯನ್ನು ಅಲ್ಲಿಯೇ ಬಿಸಾಡಿ ನಿಮ್ಮನ್ನು ಸಾಯಿಸಿ ಬಿಡುತ್ತಿದ್ದೆ ಆದರೆ ಆಗಲಿಲ್ಲ ಮುಂದೊಂದು ದಿನ ನಿಮ್ಮನ್ನು ಸಾಯಿಸುವುದಾಗಿ ಬೆದರಿಕೆ ಹಾಕಿ ಹೋಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ6 ಪ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ನಂತರ ಗಾಯಗೊಂಡ ನನ್ನನ್ನು ಮತ್ತು ನನ್ನ ತಂದೆಯವರನ್ನು ಚಾಸಾ4 ರಿಂದ ಚಾಸಾ6 ರವರು ಸೊರಬದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲಿಸಿರುತ್ತಾರೆ, ಸೊರಬ ಸರ್ಕಾರಿ ಆಸ್ಪತ್ರೆಗೆ ಸೊರಬ ಪೋಲೀಸರು ಬಂದಿದ್ದು ಅವರು ನನ್ನನ್ನು ವಿಚಾರ ಮಾಡಿ ನನ್ನ

ಹೇಳಿಕೆಯನ್ನು ನಿಪಿ –1 ರಂತೆ ಬರೆದುಕೊಂಡಿರುತ್ತಾರೆ, ಅವರು ಬರೆದುಕೊಂಡಿದ್ದನ್ನು ಓದಿ ಹೇಳಿದ್ದು ನಂತರ ನಾನು ಸದರಿ ಹೇಳಿಕೆಗೆ ನಿಪಿ 1(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ7 ಪ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಂತರ ದಿನಾಂಕಃ14–03–2022 ರಂದು ನಾನು ಸೊರಬ ಪೋಲೀಸ್ ಠಾಣೆಗೆ ಹೋಗಿ ಕೃತ್ಯ ನಡೆದ ಸಮಯದಲ್ಲಿ ನಾನು ಧರಿಸಿದ್ದ ಟೋಪಿ, ತುಂಬು ತೋಳಿನ ಶರ್ಟ್ ಮತ್ತು ಚಾಸಾ2 ರವರು ಕೃತ್ಯ ಸಮಯದಲ್ಲಿ ಧರಿಸಿದ್ದ ಅರ್ಧ ತೋಳಿನ ಶರ್ಟ್ ರಕ್ತಸಿಕ್ತವಾಗಿದ್ದು ಅವುಗಳನ್ನು ಪೋಲೀಸರ ಮುಂದೆ ಹಾಜರುಪಡಿಸಿರುತ್ತೇನೆ, ಪೋಲೀಸರು ಪಂಚರಾದ ಚೇತನ್ ಕುಮಾರ್ ಬಿ, ದಯಾನಂದ ಮತ್ತು ಚಾಸಾ2 ರವರನ್ನು ಠಾಣೆಗೆ ಕರೆಸಿ ಅವರಿಗೆ ನಿಪಿ –2 ರಂತೆ ನೋಟೀಸ್ ಕೊಟ್ಟಿರುತ್ತಾರೆ, ಸದರಿ ನೋಟೀಸಿಗೆ ನಾನು ನಿಪಿ 2(ಎ) ರಂತೆ ಸಹಿ ಮಾಡಿರುತ್ತೇನೆ , ನಂತರ ನನಗೆ ಸಂಬಂಧಪಟ್ಟ ತುಂಬು ತೋಳಿನ ಶರ್ಟ್‌ನ್ನು ಪೋಲೀಸರ ಮುಂದೆ ಹಾಜರುಪಡಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ8 ಪ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ವಶಪಡಿಸಿಕೊಂಡಂತಹ ವಸ್ತುಗಳನ್ನು ಪೊಲೀಸರು ಬಿಳಿ ಬಟ್ಟೆಯಲ್ಲಿ ಸುತ್ತಿ ಸೀಲ್ ಮಾಡಿ ಫೋಟೋಗಳನ್ನು ತೆಗೆದಿರುತ್ತಾರೆ, ಈ ಬಗ್ಗೆ ಮದ್ಯಾಹ್ನ 2 ರಿಂದ 3 ಗಂಟೆ ವರೆಗೆ ನಿಪಿ –3 ರಂತೆ ಮಹಜರ್

ಮಾಡಿರುತ್ತಾರೆ, ಸದರಿ ದಾಖಲೆಗೆ ನಾನು ನಿಪಿ 3(ಎ) ರಂತೆ ಸಹಿ ಮಾಡಿರುತ್ತೇನೆ, ನಿಪಿ 3 ಕ್ಕೆ ಚೇತನ್ ಕುಮಾರ್ ಬಿ ಮತ್ತು ದಯಾನಂದ ಮತ್ತು ಚಾಸಾ2 ರವರು ಸಹಿ ಮಾಡಿರುತ್ತಾರೆ, ನಿಪಿ3 ರ ಸಮಯದಲ್ಲಿ ಪೋಲೀಸರು ನಿಪಿ 4 ರಂತೆ ಪೋಟೋ ತೆಗೆದಿರುತ್ತಾರೆ, ನಂತರ ನನ್ನ ಮರು ಹೇಳಿಕೆಯನ್ನು ಪಡೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 9 ಪ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ-ಆರೋಪಿತರು ನನ್ನನ್ನು ಕೊಲೆ ಮಾಡಿ ಸಾಯಿಸುವ ಉದ್ದೇಶದಿಂದ ಕತ್ತಿಯಿಂದ ಹೊಡೆದು ಹಲ್ಲೆ ಮಾಡಿರುತ್ತಾರೆ, ನನ್ನ ಮತ್ತು ನನ್ನ ತಂದೆಯ ರಕ್ತದ ಗುಂಪನ್ನು ಸೊರಬ ಸರ್ಕಾರಿ ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿಸಿರುತ್ತೇವೆ, ಘಟನೆ ಸಮಯದಲ್ಲಿ ನಾನು ಮತ್ತು ನನ್ನ ತಂದೆ ಧರಿಸಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು , ಟೋಪಿಯನ್ನು ಮು ಮಾ1 ಎಂದು, ತುಂಬು ತೋಳಿನ ಶರ್ಟ್‌ನ್ನು ಮು ಮಾ 2 ಎಂದು, ಅರ್ಧ ತೋಳಿನ ಆಕಾಶ ನೀಲಿ ಬಣ್ಣದ ಶರ್ಟ್‌ನ್ನು ಮು ಮಾ 3 ಎಂದು, ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ್ದ ಕಂದ್ಲಿಯನ್ನು ಮು ಮಾ 4 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ10 ಪ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ಆರೋಪಿತರು ನೀವೇ ಆಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ11 ಫ್ರಾ.ಸಾ.2 ಲೋಕೇಶರವರು ತಮ್ಮ ಸಾಕ್ಷ್ಯದಲ್ಲಿ- ನಮಗೂ ಮತ್ತು ಆರೋಪಿತರಿಗೂ ನಮ್ಮ ಮನೆಯ ಪಕ್ಕದಲ್ಲಿರುವ ಜಾಗದ ವಿಚಾರವಾಗಿ ತಕರಾರು ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 12 ಫ್ರಾ.ಸಾ.2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ-ದಿನಾಂಕಃ 06-03-2022 ರಂದು ಸಂಜೆ 4-30 ಗಂಟೆಗೆ ನನ್ನ ಹೆಂಡತಿ ಚಾಸಾ 3 ರವರು ನಮ್ಮ ಮನೆಯ ಹಿಂಭಾಗದಲ್ಲಿರುವ ಜಾಗದಲ್ಲಿ ಸಗಣಿ ಸಾರಿಸುತ್ತಿದ್ದರು, ಆಗ ಛತ್ರಪತಿಯ ಮಗ ಅರುಣ ಅಲ್ಲಿಗೆ ಬಂದು ನನ್ನ ಹೆಂಡತಿಗೆ ಸೂಳೆ ಮುಂಡೆ, ಬೋಳಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದ, ಆಗ ನಾನು ಶಬ್ದವನ್ನು ಕೇಳಿ ಅಲ್ಲಿಗೆ ಬಂದೆ, ಆಗ ನಾನು ಅರುಣನಿಗೆ ಯಾಕೆ ಬೈಯ್ಯುತ್ತಿದ್ದೀಯಾ ಎಂದು ಕೇಳಿದೆ, ಆ ಸಮಯದಲ್ಲಿ ನಾನು ಮನೆಯಲ್ಲಿ ಒಬ್ಬನೇ ಇದ್ದೆ, ನಂತರ ನನ್ನ ಮಗ ಚಾಸಾ1 ಸ್ಥಳದ ಹತ್ತಿರ ಬಂದಿರುತ್ತಾನೆ, ನನ್ನ ಮಗ 2 ನೇ ಆರೋಪಿಗೆ ಏಕೆ ನನ್ನ ತಾಯಿಯನ್ನು ಅವಾಚ್ಯ ಶಬ್ದದಿಂದ ಬೈಯ್ಯುತ್ತಿದ್ದೀರಾ ಎಂದು ಕೇಳಿದ, ಆಗ ಆರೋಪಿತರು ಇಬ್ಬರೂ ನನ್ನ ಮಗ ಚಾಸಾ1 ರವರಿಗೆ ಬೋಳಿ ಮಗನೇ ಎಂದು ಬೈದರು, ನಂತರ 1 ನೇ ಆರೋಪಿ ನನ್ನ ಮಗ ಚಾಸಾ1 ರವರಿಗೆ ನಿನ್ನನ್ನು ಕಡಿದುಬಿಡುತ್ತೇನೆ ಎಂದು ಹೇಳಿ ಕಂದ್ಲಿಯಿಂದ ಚಾಸಾ1 ರವರ ತಲೆಯ ಎಡಭಾಗಕ್ಕೆ

ಹೊಡೆದ, ನಾನು ಬಿಡಿಸಲು ಹೋದೆ, ಆಗ 1 ನೇ ಆರೋಪಿ ಕಂದ್ಲಿಯಿಂದ ನನ್ನ ಎಡಭುಜ ಮತ್ತು ಎಡತಲೆಯ ಭಾಗಕ್ಕೆ ಹೊಡೆದಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ13 ಫ್ರಾ.ಸಾ.2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–1 ನೇ ಆರೋಪಿ ಕಂದ್ಲಿಯಿಂದ ನನ್ನ ಮಗ ಚಾಸಾ1 ರವರಿಗೆ ಹಲ್ಲೆ ಮಾಡಿದ್ದರಿಂದ ಆತನ ತಲೆಯಿಂದ ರಕ್ತ ಬರುತ್ತಿತ್ತು, ನನಗೂ ಸಹ ಎಡಭಾಗದ ಕುತ್ತಿಗೆ ಮತ್ತು ಎಡಭುಜದಿಂದ ರಕ್ತ ಬರುತ್ತಿತ್ತು, ಆ ಸಮಯದಲ್ಲಿ ಕನ್ನಪ್ಪ, ಪರಮೇಶ, ಪ್ರಭುರವರು ಸ್ಥಳಕ್ಕೆ ಬಂದು ಜಗಳ ಬಿಡಿಸಿರುತ್ತಾರೆ, ನಂತರ 1 ನೇ ಆರೋಪಿ ನಿಮ್ಮನ್ನು ಬಿಡುವುದಿಲ್ಲ, ನಿಮ್ಮನ್ನು ತೆಗೆದೇ ತೆಗೆಯುತ್ತೇನೆ ಎಂದು ಹೇಳಿ ಕಂದ್ಲಿಯನ್ನು ಅಲ್ಲೇ ಬಿಸಾಡಿ ಹೋದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ14 ಫ್ರಾ.ಸಾ.2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಂತರ ಕನ್ನಪ್ಪ, ಪರಮೇಶ, ಪ್ರಭುರವರು ನನ್ನನ್ನು ಮತ್ತು ಚಾಸಾ1 ರವರನ್ನು ಸೊರಬ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು, ನಾನು ಮತ್ತು ಚಾಸಾ1 ರವರು ಸೊರಬ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಪೋಲೀಸರು ಬಂದರು, 1 ನೇ ಆರೋಪಿ ನನ್ನ ಮಗನನ್ನು ಕೊಲೆ ಮಾಡುವ ಉದ್ದೇಶದಿಂದ ಕಂದ್ಲಿಯಿಂದ ಹಲ್ಲೆ ಮಾಡಿರುತ್ತಾನೆ,

ಆಸ್ಪತ್ರೆಯಲ್ಲಿ ನನ್ನ ಮಗ ಚಾಸಾ1 ಪೋಲೀಸರಿಗೆ ದೂರು ನೀಡಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ15 ಫ್ರಾ.ಸಾ.2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ-ದೂರು ಕೊಟ್ಟ ನಂತರ ಪೋಲೀಸರು ಘಟನೆ ನಡೆದ ಸ್ಥಳಕ್ಕೆ ಬಂದಿದ್ದರು, ಪೋಲೀಸರು ದಯಾನಂದ ಮತ್ತು ಶಿವಾನಂದರವರನ್ನು ಸ್ಥಳಕ್ಕೆ ಕರೆಸಿದ್ದರು, ಪೋಲೀಸರು ಸ್ದಳಕ್ಕೆ ದಿನಾಂಕಃ07-03-2022 ರಂದು ಮದ್ಯಾಹ್ನ 12-30 ಗಂಟೆಗೆ ಬಂದಿರುತ್ತಾರೆ, ಪೋಲೀಸರಿಗೆ ಘಟನೆ ನಡೆದ ಸ್ದಳವನ್ನು ನಾನೇ ತೋರಿಸಿರುತ್ತೇನೆ, ಸ್ಥಳದಲ್ಲಿ ಬಿದ್ದಿದ್ದ ಕಂದ್ಲಿಯನ್ನು ತೆಗೆದು ನಾನೇ ಪೋಲೀಸರಿಗೆ ನೀಡಿರುತ್ತೇನೆ, ಪೋಲೀಸರು ಕಂದ್ಲಿಯನ್ನು ಅಮಾನತ್ತುಪಡಿಸಿಕೊಂಡು ನನ್ನ ಸಮಕ್ಷಮ ಮದ್ಯಾಹ್ನ 12 ರಿಂದ 12-30 ಗಂಟೆವರೆಗೆ ನಿಪಿ 5 ರಂತೆ ಮಹಜರ್ ಕ್ರಮ ಜರುಗಿಸಿರುತ್ತಾರೆ, ಮಹಜರ್ ದಾಖಲೆಗೆ ನಾನು ನಿಪಿ 5(ಎ) ರಂತೆ ಸಹಿ ಮಾಡಿರುತ್ತೇನೆ, ನಿಪಿ-5 ಕ್ಕೆ ಪ್ರಭುಭಟ್ಟ ಮತ್ತು ಪರಮೇಶ ಮತ್ತು ಶಿವಾನಂದ ಸಹಿ ಹಾಕಿರುತ್ತಾರೆ, ಮಹಜರ್ ಮಾಡುವ ಸಮಯದಲ್ಲಿ ಪೋಲೀಸರು ನಿಪಿ 6 ಮತ್ತು 7 ರಂತೆ ಫೋಟೋಗಳನ್ನು ತೆಗೆದಿರುತ್ತಾರೆ, ಪೋಲೀಸರು ಸ್ದಳದಿಂದ ಮು ಮಾ 4 ಕಂದ್ಲಿಯನ್ನು ಅಮಾನತ್ತುಪಡಿಸಿಕೊಂಡಿರುವುದಾಗಿ , ಮು ಮಾ -4 ರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ನನ್ನ ಸಹಿ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ16 ಪ್ರಾ.ಸಾ.2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಘಟನೆ ಸಮಯದಲ್ಲಿ ನನ್ನ ಮಗ ಚಾಸಾ1 ತುಂಬು ತೋಳಿನ ಶರ್ಟ್ ಮತ್ತು ಟೋಪಿ ಧರಿಸಿದ್ದ, ನಾನು ಒಂದು ಆಕಾಶ ನೀಲಿ ಬಣ್ಣದ ಅರ್ಧ ತೋಳಿನ ಶರ್ಟ್ ನ್ನು ಧರಿಸಿದ್ದೆ, ನಾನು ಮತ್ತು ನನ್ನ ಮಗ ಧರಿಸಿದ್ದ ಶರ್ಟ್ ಗಳಿಗೆ ರಕ್ತದ ಕಲೆ ಆಗಿತ್ತು, ನಾನು ಸದರಿ ಬಟ್ಟೆಗಳನ್ನು ದಿನಾಂಕಃ 07–03–2022 ರಂದು ಪೋಲೀಸ್ ಠಾಣೆಗೆ ಹೋಗಿ ನೀಡಿರುತ್ತೇನೆ, ಪೋಲೀಸ್ ಠಾಣೆಗೆ ದಯಾನಂದ ಮತ್ತು ಕನ್ನಪ್ಪ ಬಂದಿದ್ದರು, ನನ್ನ ಮಗ ಅವನ ಬಟ್ಟೆಯನ್ನು ಆತನೇ ಪೋಲೀಸರಿಗೆ ನೀಡಿರುತ್ತಾನೆ, ಪೋಲೀಸರು ನಾನು ಮತ್ತು ನನ್ನ ಮಗ ನೀಡಿದ ಮು ಮಾ 1 ಮತ್ತು ಮು ಮಾ 2 ಬಟ್ಟೆಗಳನ್ನು ಒಂದು ಬಿಳಿ ಬಟ್ಟೆಯಲ್ಲಿ ಹಾಕಿ ಅಮಾನತ್ತುಪಡಿಸಿಕೊಂಡು ನಿಪಿ 3 ರಂತೆ ಅಮಾನತ್ತು ಮಹಜರ್ ಕ್ರಮ ಜರುಗಿಸಿರುತ್ತಾರೆ, ನಿಪಿ3 ಕ್ಕೆ ನಿಪಿ3(ಬಿ) ರಂತೆ ಸಹಿ ಮಾಡಿರುತ್ತೇನೆ, ಸದರಿ ಅಮಾನತ್ತು ಪಂಚನಾಮೆಗೆ ಪ್ರಭು ಮತ್ತು ಪರಮೇಶ ಸಹಿ ಹಾಕಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ17 ಪ್ರಾ.ಸಾ.2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಪೋಲೀಸರು ಅಮಾನತ್ತುಪಡಿಸಿಕೊಂಡ ಬಟ್ಟೆಗಳನ್ನು ಮತ್ತು ಟೋಪಿಯನ್ನು ಮು ಮಾ 1 ರಿಂದ ಮು ಮಾ 3 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ18 ಫ್ರಾ.ಸಾ.2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ-ಪೋಲೀಸರು ಸ್ಥಳ ಪಂಚನಾಮೆ ಮಾಡಿದ ಸಮಯದಲ್ಲಿ ನನ್ನನ್ನು ವಿಚಾರಿಸಿರುತ್ತಾರೆ, ಆಗ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ, ಆರೋಪಿತರನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ19 ಫ್ರಾ.ಸಾ.2 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ - 1 ನೇ ಆರೋಪಿ ನನ್ನ ಹೆಂಡತಿಗೆ ಅವಾಚ್ಯ ಶಬ್ದಗಳಿಂದ ಬೈದಾಗ ಆ ಸಮಯದಲ್ಲಿ ಮನೆಯಲ್ಲಿದ್ದ ನನ್ನ ಮಗ ಚಾಸಾ1 ಸ್ಥಳಕ್ಕೆ ಬಂದು ನನ್ನ ತಾಯಿಗೆ ಯಾಕೆ ಬೈಯ್ಯುತ್ತಿದ್ದೀಯಾ ಎಂದು ಕೇಳಿದ ಎಂದರೆ ಸರಿ, ಆಗ 1 ನೇ ಆರೋಪಿ ನೀನ್ಯಾರೋ ಬೋಳಿ ಮಗನೆ ಕೇಳುವುದಕ್ಕೆ , ನಿಮ್ಮದು ಅತಿಯಾಯಿತು ಅಂತಾ ಕೈಯಿಂದ ಚಾಸಾ1 ರವರ ಮೈಕೈಗೆ ಹೊಡೆದಿದ್ದ, ನಾನು ಗಲಾಟೆ ಬಿಡಿಸಲು ಹೋದಾಗ ಅಲ್ಲೇ ಇದ್ದ 2 ನೇ ಆರೋಪಿ ಕೈಯಿಂದ ನನ್ನ ಮೈಕೈಗೆ ಗುದ್ದಿದ ಎಂದರೆ ಸರಿ, 2 ನೇ ಆರೋಪಿ ಸಹ ನನ್ನ ಮತ್ತು ನನ್ನ ಮಗ ಚಾಸಾ1 ರವರನ್ನು ಉದ್ದೇಶಿಸಿ ಈ ದಿನ ಬದುಕಿಕೊಂಡಿದ್ದೀರಾ, ಇನ್ನೊಂದು ಸಾರಿ ಸಿಕ್ಕರೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ ಎಂದರೆ ಸರಿ, ಸದರಿ ವಿಚಾರವನ್ನು ನಾನು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ20 ಫ್ರಾ.ಸಾ.2 ರವರು ಮುಂದುವರೆದು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – ಸ್ಥಳ ಪಂಚನಾಮೆ ಮಾಡುವ ಮೊದಲು ನನಗೆ, ಪ್ರಭುಭಟ್ಟರಿಗೆ ಮತ್ತು ಶಿವಾನಂದ ಇವರಿಗೆ ಪೋಲೀಸರು ನಿಪಿ 8 ನೋಟೀಸ್ ನ್ನು ಜಾರಿ ಮಾಡಿದ್ದರು ಎಂದರೆ ಸರಿ, ನಿಪಿ–8 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ8–(ಎ) ಎಂದು ಗುರುತಿಸಿ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 21 ಫ್ರಾ.ಸಾ.2 ರವರು ಮುಂದುವರೆದು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – ನನಗೆ ಮತ್ತು ಚಾಸಾ1, ಚೇತನ್ ಕುಮಾರ್ ಮತ್ತು ದಯಾನಂದರವರಿಗೆ ನಿಪಿ 2 ರಂತೆ ನೋಟೀಸ್ ಜಾರಿ ಮಾಡಿದ್ದರು ಎಂದರೆ ಸರಿ, ನಿಪಿ 2 ರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ2(ಬಿ) ಎಂದು ಗುರುತಿಸಿ, ಸದರಿ ನಿಪಿ3 ಪಂಚನಾಮೆಯನ್ನು ದಿನಾಂಕಃ 14–03–2022 ರಂದು ಮದ್ಯಾಹ್ನ 2 ರಿಂದ 3 ಗಂಟೆ ವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ, ಆ ಸಮಯದಲ್ಲಿ ಈಗ ತೋರಿಸಿದ ನಿಪಿ4 ರಂತೆ ಫೋಟೋ ತೆಗೆದಿರುತ್ತಾರೆ ಎಂದರೆ ಸರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ22 ಫ್ರಾ.ಸಾ.3 ಮಂಜುಳಾ ರವರು ತಮ್ಮ ಸಾಕ್ಷ್ಯದಲ್ಲಿ – ನಮಗೂ ಮತ್ತು ಆರೋಪಿತರಿಗೂ ಜಾಗದ ವಿಚಾರವಾಗಿ ತಕರಾರು ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 23 ಪ್ರಾ.ಸಾ.3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ-ಸುಮಾರು 3 ವರ್ಷಗಳ ಹಿಂದೆ ಸಂಜೆ 5-00 ಗಂಟೆ ಸಮಯದಲ್ಲಿ ನಮ್ಮ ಮನೆಯ ಹಿಂಭಾಗದಲ್ಲಿರುವ ಜಾಗದಲ್ಲಿ ಸಗಣಿ ಸಾರಿಸುತ್ತಿದ್ದೆ, ಆಗ ಛತ್ರಪತಿಯ ಮಗ ಅರುಣ ಅಲ್ಲಿಗೆ ಬಂದು ನನಗೆ ಸೂಳೆ ಮುಂಡೆ, ಹಾದರಗಿತ್ತಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದ, ಆಗ ಸ್ದಳಕ್ಕೆ ಚಾಸಾ1 ನನ್ನ ಮಗ ಬಂದು, 1 ನೇ ಆರೋಪಿ ಅರುಣನಿಗೆ ಏಕೆ ನನ್ನ ತಾಯಿಯನ್ನು ಬೈಯ್ಯುತ್ತಿದ್ದೀಯಾ ಎಂದು ಕೇಳಿದ, ಆಗ 1 ನೇ ಆರೋಪಿ ನನ್ನ ಮಗನಿಗೆ ನೀನು ಯಾರೋ ಕೇಳುವುದಕ್ಕೆ ಬೋಳಿ ಮಗನೇ, ಸೂಳೆ ಮಗನೆ ಎಂದು ಬೈದ, ನಂತರ 1 ನೇ ಆರೋಪಿ ನನ್ನ ಮಗ ಚಾಸಾ1 ರವರನ್ನು ನೂಕಿರುತ್ತಾನೆ, ಆ ಸಂದರ್ಭದಲ್ಲಿ ನನ್ನ ಗಂಡ ಚಾಸಾ2 ರವರು ಸ್ದಳಕ್ಕೆ ಬಂದರು, ಆಗ 2 ನೇ ಆರೋಪಿ ಚಾಸಾ2 ರವರಿಗೆ ಕೋಲಿನಲ್ಲಿ ಹೊಡೆದಿರಬಹುದು. 1 ನೇ ಆರೋಪಿ ಕಂದ್ಲಿಯನ್ನು ತೆಗೆದುಕೊಂಡು ನನ್ನ ಮಗ ಚಾಸಾ1 ರವರ ತಲೆಯ ಎಡಭಾಗಕ್ಕೆ ಹೊಡೆದ, ತಲೆ ಸೀಳಿ ಹೋಗಿ ರಕ್ತ ಬಹಳ ಬಂತು, ಆಗ ನಮ್ಮ ಮನೆಯವರು ಚಾಸಾ2 ಚಾಸಾ1 ರವರನ್ನು ಬಿಡಿಸಲು ಹೋದರು, ಆಗ 1 ನೇ ಆರೋಪಿ ನನ್ನ ಗಂಡ ಚಾಸಾ2 ರವರಿಗೆ ಕಂದ್ಲಿಯಿಂದ ಎಡ ಭುಜಕ್ಕೆ ಮತ್ತು ಎಡಕಿವಿಗೆ ಹೊಡೆದ, ಆಗ ಅವರಿಗೆ ಗಾಯ ಆಗಿ ರಕ್ತ ಬಂದಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ24 ಫ್ರಾ.ಸಾ.3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಆ ಸಮಯದಲ್ಲಿ ಕನ್ನಪ್ಪ, ಪರಮೇಶ ಮತ್ತು ನನ್ನ ಚಿಕ್ಕ ಮಗ ಶ್ರೀಧರ ಸ್ಥಳಕ್ಕೆ ಬಂದು ಜಗಳ ಬಿಡಿಸಿರುತ್ತಾರೆ, ಆರೋಪಿತರು ನಿಮ್ಮನ್ನು ಬಿಡುವುದಿಲ್ಲ, ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದರು, 1ನೇ ಆರೋಪಿ ಕಂದ್ಲಿಯನ್ನು ಅಲ್ಲೇ ಬಿಸಾಡಿದ, ಆರೋಪಿತರು ನನ್ನ ಮಗ ಚಾಸಾ1 ಮತ್ತು ನನ್ನ ಗಂಡ ಚಾಸಾ2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಕಂದ್ಲಿಯಿಂದ ಹಲ್ಲೆ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 25 ಫ್ರಾ.ಸಾ.3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಂತರ ಕನ್ನಪ್ಪ, ನನ್ನ ಮಗ ಶ್ರೀಧರ, ಪರಮೇಶರವರು ಚಾಸಾ1 ಮತ್ತು ಚಾಸಾ2 ರವರನ್ನು ಸೊರಬ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು, ಘಟನಾ ಸಮಯದಲ್ಲಿ ಚಾಸಾ1 ರವರು ಒಂದು ಟೋಪಿ ಮತ್ತು ಒಂದು ಬಿಳಿ ನೀಲಿ ಬಣ್ಣದ ಶರ್ಟ್ ಅನ್ನು ಧರಿಸಿದ್ದರು, ನನ್ನ ಗಂಡ ಚಾಸಾ2 ರವರು ಅರ್ಧ ತೋಳಿನ ಶರ್ಟ್ ಧರಿಸಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 26 ಫ್ರಾ.ಸಾ.3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಟೋಪಿಯನ್ನು ಮು ಮಾ 1 ಎಂದು, ಚಾಸಾ1 ಮತ್ತು ಚಾಸಾ2 ರವರು ಧರಿಸಿದ್ದ ಬಟ್ಟೆಗಳನ್ನು ಮು ಮಾ 2 ಮತ್ತು ಮು ಮಾ 3 , 1ನೇ ಆರೋಪಿ ಚಾಸಾ1 ಮತ್ತು ಚಾಸಾ2 ರವರಿಗೆ ಹಲ್ಲೆ

ಮಾಡಲು ಬಳಸಿದ್ದ ಮು ಮಾ 4 ಕಂದ್ಲಿಯನ್ನು ನೋಡಿ ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 27 ಫ್ರಾ.ಸಾ.3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಆರೋಪಿತರು ನೀವೇ ಆಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ28 ಫ್ರಾ.ಸಾ.3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಗಲಾಟೆಯಾದ ಮಾರನೇ ದಿವಸ ಪೋಲೀಸರು ಘಟನೆ ನಡೆದ ಸ್ಥಳದ ಹತ್ತಿರ ಬಂದಿದ್ದರು, ಆ ಸಂದರ್ಭದಲ್ಲಿ ಪೋಲೀಸರು ನನ್ನನ್ನು ವಿಚಾರಿಸಿದರು, ನಾನು ಅವರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 29 ಫ್ರಾ.ಸಾ.4 ಶ್ರೀಧರ್ ರವರು ತಮ್ಮ ಸಾಕ್ಷ್ಯದಲ್ಲಿ– ನಮ್ಮ ಮನೆ ಮತ್ತು ಆರೋಪಿತರ ಮನೆ ಮಧ್ಯದಲ್ಲಿ ಖಾಲಿ ಜಾಗ ಇರುತ್ತದೆ, ಆ ಜಾಗದ ವಿಚಾರವಾಗಿ ನಮಗೂ ಮತ್ತು ಆರೋಪಿತರಿಗೂ ಸ್ವಲ್ಪ ತಕರಾರು ಇತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 30 ಫ್ರಾ.ಸಾ.4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ದಿನಾಂಕಃ 06–03–2022 ರಂದು ಸಂಜೆ 5–00 ಗಂಟೆಗೆ ನಾನು ಕನ್ನಪ್ಪರವರ ಮನೆಗೆ ಹೋಗಿ ಕನ್ನಪ್ಪರವರ

ಜೊತೆ ಮಾತನಾಡುತ್ತಿದ್ದಾಗ ನಮ್ಮ ಮನೆಯ ಹಿಂಭಾಗದಿಂದ ಗಲಾಟೆ ಶಬ್ದ ಕೇಳಿಸಿತು, ಆಗ ನಾನು ಮತ್ತು ಕನ್ನಪ್ಪ ತಕ್ಷಣ ಸ್ಥಳಕ್ಕೆ ಬಂದೆವು, ನಾವಿಬ್ಬರೂ ಸ್ದಳಕ್ಕೆ ಬರುವಷ್ಟರಲ್ಲಿ 1 ನೇ ಆರೋಪಿ ಅರುಣ ಕತ್ತಿಯಿಂದ ನನ್ನ ಅಣ್ಣ ಚಾಸಾ1 ರವರಿಗೆ ತಲೆಯ ಎಡಭಾಗಕ್ಕೆ ಹೊಡೆದ, ಆಗ ನನ್ನ ತಂದೆ ಚಾಸಾ2 ರವರು ಗಲಾಟೆ ಬಿಡಿಸಲು ಸ್ಥಳಕ್ಕೆ ಬಂದರು, 1 ನೇ ಆರೋಪಿ ಅದೇ ಕತ್ತಿಯಿಂದ ನನ್ನ ತಂದೆ ಚಾಸಾ2 ರವರಿಗೆ ಎಡಭಾಗದ ಕುತ್ತಿಗೆಗೆ ಮತ್ತು ಭುಜಕ್ಕೆ ಹೊಡೆದನು, 1 ನೇ ಆರೋಪಿ ಅರುಣ ಮು ಮಾ –4 ಕತ್ತಿಯಿಂದ ನನ್ನ ಅಣ್ಣನ ತಲೆಯ ಎಡಭಾಗಕ್ಕೆ ಹೊಡೆದಿದ್ದರಿಂದ ತಲೆ ಸೀಳಿ ಹೋಗಿತ್ತು, ಆ ಸಮಯಕ್ಕೆ ನನ್ನ ಚಿಕ್ಕಪ್ಪ ಚಾಸಾ 6 ರವರು ಸ್ಥಳಕ್ಕೆ ಬಂದರು, ಊರಿನವರು ಸಹ ಸ್ಥಳಕ್ಕೆ ಬಂದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 31 ಫ್ರಾ.ಸಾ.4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಂತರ ನಾನು, ಚಾಸಾ6 ಮತ್ತು ಊರಿನವರು ಸೇರಿಕೊಂಡು ಗಲಾಟೆಯನ್ನು ಬಿಡಿಸಿದೆವು, ಆಗ 1 ನೇ ಆರೋಪಿ ಮು ಮಾ –4 ಕತ್ತಿಯನ್ನು ಅಲ್ಲೇ ಬಿಸಾಡಿ ನನ್ನ ತಂದೆ ಮತ್ತು ನನ್ನ ಅಣ್ಣನಿಗೆ ಈ ಸಲ ತಪ್ಪಿಸಿಕೊಂಡಿದ್ದೀರಾ ಮತ್ತೆ ಸಿಕ್ಕರೆ ಬಿಡುವುದಿಲ್ಲ, ಸಾಯಿಸಿಬಿಡುತ್ತೇನೆ ಎಂದು ಹೇಳಿದನು, ನಂತರ ನಾವು ನನ್ನ ಅಣ್ಣ ಮತ್ತು ತಂದೆಯವರನ್ನು ಸೊರಬದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು, 1 ನೇ ಆರೋಪಿ ಕೊಲೆ ಮಾಡುವ ಉದ್ದೇಶದಿಂದ ನನ್ನ ಅಣ್ಣ ಮತ್ತು ತಂದೆಯವರಿಗೆ ಕತ್ತಿಯಿಂದ ಹಲ್ಲೆ ಮಾಡಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 32 ಪ್ರಾ.ಸಾ.4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಈ ಘಟನೆ ಬಗ್ಗೆ ನನ್ನ ಅಣ್ಣ ಚಾಸಾ1 ರವರು ಪೋಲೀಸರಿಗೆ ದೂರು ನೀಡಿರುತ್ತಾರೆ, ನನ್ನ ಅಣ್ಣ ದೂರು ಕೊಟ್ಟ ಮೇಲೆ ಪೋಲೀಸರು ನನ್ನನ್ನು ವಿಚಾರಿಸಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ, ಆ ದಿವಸ ಗಲಾಟೆ ಮಾಡಿದ ಆರೋಪಿತರು ನೀವೇ ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ33 ಪ್ರಾ.ಸಾ.4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಗಲಾಟೆಯಾದ ಸಮಯದಲ್ಲಿ ನನ್ನ ಅಮ್ಮ ಸದರಿ ಸ್ಥಳದಲ್ಲಿ ಸಗಣಿ ಸಾರಿಸುತ್ತಿದ್ದರು, ಆ ಸಮಯದಲ್ಲಿ 1 ನೇ ಆರೋಪಿ ನನ್ನ ತಾಯಿ ಬಳಿ ಹೋಗಿ ಅವಾಚ್ಯ ಶಬ್ದಗಳಿಂದ ಅಂದರೆ ಸೂಳೆ ಮುಂಡೆ, ಬೋಳಿ ಮುಂಡೆ ಎಂದು ಬೈದಿರುತ್ತಾನೆ, ಆ ಸಮಯಕ್ಕೆ ನನ್ನ ಅಣ್ಣ ಚಾಸಾ1 ರವರು ಸ್ಥಳಕ್ಕೆ ಬಂದು ನನ್ನ ತಾಯಿಗೆ ಯಾಕೆ ಬೈಯುತ್ತಿದ್ದೀಯ ಎಂದು 1 ನೇ ಆರೋಪಿಯನ್ನು ಕೇಳಿದರು, ಆಗ 1 ನೇ ಆರೋಪಿ ನನ್ನ ಅಣ್ಣನಿಗೆ ಚಾಸಾ1 ರವರಿಗೆ ಹೊಡೆದಿರುತ್ತಾನೆ, ಆಗ ನನ್ನ ತಂದೆ ಬಿಡಿಸಲು ಬಂದಾಗ 2 ನೇ ಆರೋಪಿ ನನ್ನ ತಂದೆಗೆ ಕೈಯಿಂದ ಹೊಡೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 34 ಫ್ರಾ.ಸಾ.5 ಕನ್ನಪ್ಪ ರವರು ತಮ್ಮ ಸಾಕ್ಷ್ಯದಲ್ಲಿ- ನಮ್ಮ ಮನೆಯ ಪಕ್ಕ ಆರೋಪಿತರ ಮನೆ ಇರುತ್ತದೆ, ಆರೋಪಿತರು ಮತ್ತು ಚಾಸಾ1 ಮತ್ತು 2 ರವರ ನಡುವೆ ಬೇಲಿ ವಿಚಾರದಲ್ಲಿ ತಕರಾರು ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 35 ಫ್ರಾ.ಸಾ.5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ದಿನಾಂಕಃ 06-03-2022 ರಂದು ಸಂಜೆ 5-00 ಗಂಟೆಗೆ ನಾನು ನಮ್ಮ ಮನೆಯ ಹತ್ತಿರ ಟ್ರಾಕ್ಟರ್ ನಿಂದ ಕಟ್ಟಿಗೆಯನ್ನು ಇಳಿಸುತ್ತಿದ್ದೆ , ಆಗ ಚಾಸಾ4 ರವರು ಸಹ ನಮ್ಮ ಮನೆ ಹತ್ತಿರ ಇದ್ದರು, ನಾನು ಮತ್ತು ಚಾಸಾ4 ರವರು ಮಾತನಾಡುತ್ತಾ ನಿಂತಿದ್ದೆವು, ಆಗ 1 ನೇ ಆರೋಪಿ ಚಾಸಾ1 ರವರು ಜಗಳ ಆಡುವ ಶಬ್ದ ಕೇಳಿ ಬಂತು, ಆಗ ನಾನು, ಆರೋಪಿತರು ಮತ್ತು ಚಾಸಾ1 ರವರು ಚೆನ್ನಾಗಿ ಇದ್ದರು, ಯಾವುದೋ ವಿಚಾರಕ್ಕೆ ಮಾತನಾಡಿಕೊಳ್ಳುತ್ತಿರಬಹುದು ಎಂದು ನಾನು ಸುಮ್ಮನಾದೆ, ಚಾಸ4 ರವರು ಜೋರಾಗಿ ಮಾತನಾಡಿಕೊಳ್ಳುತ್ತಿದ್ದಾರೆ ಎಂದು ತಮ್ಮ ಮನೆಯ ಹತ್ತಿರ ಹೋದರು, ನಾನೂ ಕೂಡ ಅಲ್ಲಿಗೆ ಹೋದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 36 ಫ್ರಾ.ಸಾ.5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ಚಾಸಾ2 ರವರ ಮನೆಯ ಹಿಂಬದಿಯಲ್ಲಿ ಚಾಸಾ3 ರವರು ಸಗಣಿ ಸಾರಿಸುತ್ತಿದ್ದರು, ಆ ವಿಚಾರದಲ್ಲಿ 1 ನೇ ಆರೋಪಿ ಅಲ್ಲಿಗೆ ಬಂದು ಚಾಸಾ3 ರವರಿಗೆ ಯಾಕೆ ಇಲ್ಲಿ ಸಗಣಿ ಸಾರಿಸುತ್ತಿದ್ದೀರಾ ಎಂದು ಹೇಳಿ ಕೆಟ್ಟ

ಪದಗಳಿಂದ ಬೈದಿರುತ್ತಾನೆ, ಆಗ ಚಾಸಾ1 ರವರು ಮನೆಯಿಂದ ಹೊರಗಡೆ ಬಂದು 1 ನೇ ಆರೋಪಿಗೆ ಯಾಕೆ ನನ್ನ ತಾಯಿಗೆ ಬೈಯ್ಯುತ್ತಿದ್ದೀಯಾ ಎಂದು ಕೇಳಿರುತ್ತಾನೆ, ಆಗ 1 ನೇ ಆರೋಪಿ ಚಾಸಾ1 ರವರಿಗೆ ನೀನು ಯಾವನೋ ಕೇಳುವುದಕ್ಕೆ ಬೋಳಿ ಮಗನೇ ಎಂದು ಬೈದಿರುತ್ತಾನೆ, ಆಗ ಇಬ್ಬರೂ ಕುಸ್ತಿ ಮಾಡಿರುತ್ತಾರೆ, ಆ ಸಂದರ್ಭದಲ್ಲಿ ಚಾಸಾ2 ರವರು ಜಗಳ ಬಿಡಿಸಲು ಬಂದಿರುತ್ತಾರೆ, ಸ್ಥಳಕ್ಕೆ 2 ನೇ ಆರೋಪಿ ಬಂದು ಚಾಸಾ2 ರವರಿಗೆ ಹೊಡೆದರು, ನಂತರ 1 ನೇ ಆರೋಪಿ ಕತ್ತಿ ತೆಗೆದುಕೊಂಡು ಚಾಸಾ1 ಮಾಲತೇಶನ ತಲೆಯ ಎಡಭಾಗಕ್ಕೆ ಹೊಡೆದಿರುತ್ತಾನೆ, ಚಾಸಾ1 ರವರಿಗೆ ತೀವ್ರ ಸ್ವರೂಪದ ರಕ್ತಗಾಯವಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 37 ಫ್ರಾ.ಸಾ.5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಚಾಸಾ2 ರವರು ಬಿಡಿಸಲು ಬಂದಾಗ ಅವರಿಗೂ ಸಹ 1 ನೇ ಆರೋಪಿ ಕತ್ತಿಯಿಂದ ಕುತ್ತಿಗೆಯ ಎಡಭಾಗಕ್ಕೆ ಮತ್ತು ಎಡಭುಜಕ್ಕೆ ಹೊಡೆದಿರುತ್ತಾನೆ, ಚಾಸಾ2 ರವರಿಗೂ ಸಹ ತೀವ್ರವಾದ ರಕ್ತಗಾಯವಾಗಿ ರಕ್ತಸ್ರಾವವಾಯಿತು, ಆಗ ನಾವುಗಳು ಜಗಳವನ್ನು ಬಿಡಿಸಿದೆವು, ನಾನು, ಚಾಸಾ4, ಚಾಸಾ6, ಚಾಸ 1 ಮತ್ತು 2 ರವರನ್ನು ವಾಹನದಲ್ಲಿ ಸೊರಬ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ, ಗಲಾಟೆಯನ್ನು ಬಿಡಿಸಿದ ಮೇಲೆ 1 ನೇ ಆರೋಪಿ ಕತ್ತಿಯನ್ನು ಸ್ಥಳದಲ್ಲೆ ಬಿಸಾಡಿ ಚಾಸಾ1 ಮತ್ತು 2 ರವರಿಗೆ ನೀವು ಇವತ್ತು

ಬದುಕಿಕೊಂಡಿದ್ದೀರಾ ಮತ್ತೆ ಸಿಕ್ಕರೆ ನಿಮ್ಮನ್ನು ಬಿಡುವುದಿಲ್ಲ ಎಂದು ಹೇಳಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ38 ಫ್ರಾ.ಸಾ.5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– 1 ನೇ ಆರೋಪಿ ಚಾಸಾ1 ಮತ್ತು 2 ರವರಿಗೆ ಮು ಮಾ 4 ಕತ್ತಿಯಿಂದ ಹಲ್ಲೆ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 39 ಫ್ರಾ.ಸಾ.5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– 1 ನೇ ಆರೋಪಿ ಚಾಸಾ1 ಮತ್ತು 2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಕತ್ತಿಯಿಂದ ಹಲ್ಲೆ ಮಾಡಿರುತ್ತಾನೆ, ಆ ದಿವಸ ಗಲಾಟೆ ಮಾಡಿದ ಆರೋಪಿತರು ನೀವೇ ಆಗಿರುವುದಾಗಿ ಮತ್ತು ಈ ವಿಚಾರವನ್ನು ನಾನು ಪೋಲೀಸರ ಮುಂದೆ ಹೇಳಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 40 ಫ್ರಾ.ಸಾ.6 ಪರಮೇಶಪ್ಪ ರವರು ತಮ್ಮ ಸಾಕ್ಷ್ಯದಲ್ಲಿ– ಆರೋಪಿತರು ಮತ್ತು ಚಾಸಾ1 ಮತ್ತು 2 ರವರ ನಡುವೆ ಜಾಗದ ವಿಚಾರದಲ್ಲಿ ತಕರಾರು ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ41 ಫ್ರಾ.ಸಾ.6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ದಿನಾಂಕಃ 06-03-2022 ರಂದು ಸಂಜೆ 5-00 ಗಂಟೆಗೆ ನಾನು ನಮ್ಮ ಮನೆಯ ಹತ್ತಿರ ಇದ್ದೆ, ಆಗ ನನ್ನ ಅಣ್ಣ ಚಾಸ2 ರವರ ಮನೆಯ ಹತ್ತಿರ ಜನ ಸೇರಿದ್ದರು, ಅದನ್ನು ನೋಡಿ ನಾನು ನನ್ನ ಬೈಕ್ ನಲ್ಲಿ ನನ್ನ ಅಣ್ಣನ ಮನೆಯ ಬಳಿ ಹೋದೆ, ಆಗ ನನ್ನ ಅತ್ತಿಗೆ ಅವರ ಮನೆಯ ಹಿಂಭಾಗದಲ್ಲಿ ಸಗಣಿ ಸಾರಿಸುತ್ತಿದ್ದರು, ಆಗ 1 ನೇ ಆರೋಪಿ ನನ್ನ ಅತ್ತಿಗೆ ಚಾಸಾ3 ರವರಿಗೆ ಕೆಟ್ಟ ಬಾಷೆಯಿಂದ ಬೈದಿರುತ್ತಾನೆ. ನಂತರ ನನ್ನ ಅಣ್ಣ ಚಾಸಾ2 ರವರು ಸ್ಥಳಕ್ಕೆ ಬಂದಿರುತ್ತಾರೆ, ನನ್ನ ಅಣ್ಣನ ಮಗ ಚಾಸಾ1 ರವರು ಸಹ ಅಲ್ಲಿಗೆ ಬಂದಿರುತ್ತಾರೆ, 1 ನೇ ಆರೋಪಿ ಮಚ್ಚಿನಿಂದ ಚಾಸಾ1 ರವರ ತಲೆಯ ಎಡಭಾಗಕ್ಕೆ ಹೊಡೆದಿರುತ್ತಾರೆ, ಆಗ ಚಾಸಾ1 ರವರಿಗೆ ತಲೆಯಿಂದ ರಕ್ತ ಬಂದಿರುತ್ತದೆ, ನನ್ನ ಅಣ್ಣನಿಗೂ ಸಹ ಪೆಟ್ಟಾಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ42 ಫ್ರಾ.ಸಾ.6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ-ಗಲಾಟೆಯನ್ನು ಊರಿನ ಜನ ಬಿಡಿಸಿರುತ್ತಾರೆ, 1 ನೇ ಆರೋಪಿ ಮಚ್ಚನ್ನು ಅಲ್ಲೇ ಬಿಸಾಡಿ ಹೋದ, ಸ್ಥಳದಿಂದ ಹೋಗಬೇಕಾದರೆ 1 ನೇ ಅರೋಪಿ ಈ ದಿವಸ ತಪ್ಪಿಸಿಕೊಂಡಿದ್ದೀರಾ ಮತ್ತೆ ಸಿಕ್ಕಿದರೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾನೆ, ನಂತರ ನಾನು ಚಾಸಾ4, ಚಾಸಾ5 ರವರು ಚಾಸಾ1 ಮತ್ತು 2 ರವರನ್ನು ಸೊರಬ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ, 1 ನೇ ಆರೋಪಿ ಚಾಸಾ1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಆತನಿಗೆ

ಮಚ್ಚಿನಿಂದ ಹೊಡೆದಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 43 ಪ್ರಾ.ಸಾ.6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– 1 ನೇ ಆರೋಪಿ ಚಾಸಾ1 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ ಮಚ್ಚನ್ನು ಮು ಮಾ 4 ಎಂದು ಗುರುತಿಸಿ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 44 ಪ್ರಾ.ಸಾ.6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಆ ದಿವಸ ಗಲಾಟೆ ಮಾಡಿದ ಆರೋಪಿತರು ನೀವೇ ಆಗಿರುವುದಾಗಿ ಹಾಗೂ ಈ ವಿಚಾರವನ್ನು ನಾನು ಪೋಲೀಸರ ಮುಂದೆ ಹೇಳಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 45 ಪ್ರಾ.ಸಾ.7 ಪ್ರಭು ಭಟ್ಟ ರವರು ತಮ್ಮ ಸಾಕ್ಷ್ಯದಲ್ಲಿ– ಪೋಲೀಸರು ಈ ಪ್ರಕರಣದಲ್ಲಿ ಸ್ಥಳ ಪಂಚನಾಮೆ ಮಾಡಿದ ಬಗ್ಗೆ ಗೊತ್ತು, ಚಾಸಾ6 ರವರು ನನಗೆ ಕರೆ ಮಾಡಿ ಚಾಸಾ2 ರವರ ಮನೆಯ ಹತ್ತಿರ ಬನ್ನಿ ಎಂದು ತಿಳಿಸಿದರು, ನಾನು ಚಾಸಾ2 ರವರ ಮನೆಗೆ ಹೋದಾಗ ಪೋಲೀಸರು ಬಂದಿದ್ದರು, ಚಾಸಾ2 ರವರ ಮನೆಯ ಹತ್ತಿರ ನನ್ನ ಎರಡು ಸಹಿ ತೆಗೆದುಕೊಂಡರು ಮತ್ತು ನನ್ನನ್ನು ಮತ್ತು ಇನ್ನೊಬ್ಬರನ್ನು ಮತ್ತು ಚಾಸಾ2 ರವರನ್ನು

ನಿಲ್ಲಿಸಿ ಫೋಟೋಗಳನ್ನು ತೆಗೆದಿರುತ್ತಾರೆ, ನಿಪಿ 8 ಕ್ಕೆ ನಿಪಿ8(ಬಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ46 ಪ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ನಾನು ಚಾಸಾ2 ರವರ ಮನೆಗೆ ದಿನಾಂಕಃ 07-03-2022 ರಂದು ಹೋಗಿರುತ್ತೇನೆ, ನಾನು ಅವರ ಮನೆಗೆ ಹೋದಾಗ ಬೆಳಿಗ್ಗೆ 11-45 ಗಂಟೆ ಆಗಿತ್ತು, ನಾನು ಚಾಸಾ2 ರವರ ಮನೆಗೆ ಹೋದಾಗ ಚಾಸಾ2 ರವರು ಪೋಲೀಸರ ಹತ್ತಿರ ಏನೋ ಮಾತನಾಡುತ್ತಿದ್ದರು, ನಾನು ಚಾಸಾ2 ರವರ ಮನೆಗೆ ಹೋದಾಗ ಚಾಸಾ2 ರವರಿಗೂ ಮತ್ತು ಅವರ ಪಕ್ಕದ ಮನೆಯವರಾದ ಆರೋಪಿತರ ನಡುವೆ ಗಲಾಟೆ ಆಗಿರುತ್ತದೆ ಎಂದು ಗೊತ್ತಾಯಿತು, ಗಲಾಟೆಯಾದ ಸ್ಥಳವನ್ನು ಪೋಲೀಸರಿಗೆ ಯಾರು ತೋರಿಸಿದರು ಎಂದರೆ ಸಾಕ್ಷಿ ಚಾಸಾ2 ರವರು ಪೋಲೀಸರ ಜೊತೆ ಮಾತನಾಡುತ್ತಿದ್ದರು ನನಗೆ ಅಷ್ಟು ಮಾತ್ರ ಗೊತ್ತು ಎಂದು ಹೇಳುತ್ತಾರೆ, ಸಾಕ್ಷಿ ನಾನು ದೂರದಲ್ಲಿದ್ದೆ, ಚಾಸಾ2 ಮತ್ತು ಪೋಲೀಸರು ಏನು ಮಾತನಾಡಿಕೊಳ್ಳುತ್ತಿದ್ದರು ಎಂದು ನನಗೆ ಸರಿಯಾಗಿ ಕೇಳಿಸಿಲ್ಲ, ಚಾಸಾ2 ರವರು ಪೋಲೀಸರಿಗೆ ಒಂದು ಕತ್ತಿಯನ್ನು ಕೊಟ್ಟರು, ಆಗ ಪೋಲೀಸರು ನಮ್ಮನ್ನು ನಿಲ್ಲಿಸಿ ಫೋಟೋ ತೆಗೆದಿರುತ್ತಾರೆ, ಈಗ ತೋರಿಸಿದ ಮು ಮಾ 4 ಚಾಸಾ2 ರವರು ಆ ದಿವಸ ಪೋಲೀಸರಿಗೆ ನೀಡಿದ ಕತ್ತಿ ಇರಬಹುದು, ಮು ಮಾ 4 ರ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 47 ಪ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಈಗ ತೋರಿಸಿದ ನಿಪಿ 6 ಮತ್ತು ನಿಪಿ 7 ಸ್ಥಳದಲ್ಲಿ ತೆಗೆದ ಫೋಟೋ ಆಗಿರುತ್ತವೆ, ನಿಪಿ 7 ಫೋಟೋದಲ್ಲಿ ಪೋಲೀಸರಿಗೆ ಕತ್ತಿ ಕೊಡುತ್ತಿರುವ ವ್ಯಕ್ತಿ ಚಾಸಾ2 ರವರು ಆಗಿರುತ್ತಾರೆ, ನಿಪಿ 5 ಕ್ಕೆ ನಿಪಿ 5(ಬಿ) ರಂತೆ ಸಹಿ ಮಾಡಿರುತ್ತೇನೆ ಎಂದು, ನಿಪಿ 5 ಕ್ಕೆ ಚಾಸಾ8 ರವರು ಸಹ ಸಹಿ ಹಾಕಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ48 ಪ್ರಾ.ಸಾ.7 ರವರು ಸರ್ಕಾರಿ ಅಭಿಯೋಜಕರು ತಮ್ಮ ಪಾಟೀಸವಾಲಿನಲ್ಲಿ – ನಾನು ಚಾಸಾ2 ರವರ ಮನೆಯ ಹತ್ತಿರ ಹೋದಾಗ ಪೋಲೀಸರು ಸ್ಥಳ ಪಂಚನಾಮೆ ಮಾಡುವ ಸಲುವಾಗಿ ನಿಪಿ8 ರಂತೆ ನನಗೆ ನೋಟೀಸ್ ಜಾರಿ ಮಾಡಿರುತ್ತಾರೆ ಎಂದರೆ ಸರಿ, ಚಾಸಾ2 ರವರು ಅವರ ಮನೆ ಮತ್ತು ಆರೋಪಿತರ ಮನೆ ನಡುವೆ ಇರುವ ಖಾಲಿ ಜಾಗವನ್ನು ತೋರಿಸಿ ಇದೇ ಸ್ಥಳದಲ್ಲಿ ಘಟನೆ ನಡೆಯಿತು ಎಂದು ಹೇಳಿದ ಮೇರೆಗೆ ಪೋಲೀಸರು ನನ್ನ ಸಮಕ್ಷಮ ನಿಪಿ 5 ರಂತೆ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ49 ಪ್ರಾ.ಸಾ.7 ರವರು ಮುಂದುವರೆದು ಸರ್ಕಾರಿ ಅಭಿಯೋಜಕರು ತಮ್ಮ ಪಾಟೀಸವಾಲಿನಲ್ಲಿ –ನಿಪಿ 6 ಮತ್ತು 7 ಫೋಟೋದಲ್ಲಿ ನಾನು ಚಾಸಾ2 ರವರ ಪಕ್ಕದಲ್ಲಿ

ಇರುತ್ತೇನೆ ಎಂದರೆ ಸರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 50 ಪ್ರಾ.ಸಾ.8 ಬಿ. ಶಿವಾನಂದರವರು ತಮ್ಮ ಸಾಕ್ಷ್ಯದಲ್ಲಿ – ಪೋಲೀಸರು ಈ ಪ್ರಕರಣದಲ್ಲಿ ಪಂಚನಾಮೆ ಮಾಡಿರುವ ಬಗ್ಗೆ ಗೊತ್ತು, ದಿನಾಂಕಃ 07–03–2022 ರಂದು ಬೆಳಿಗ್ಗೆ 10–00 ಗಂಟೆಗೆ ನಾನು ಚಾಸಾ2 ಲೋಕೇಶನ ಮನೆಗೆ ಹೋಗಿರುತ್ತೇನೆ, ಅಲ್ಲಿಗೆ ಸೊರಬ ಪೋಲೀಸರು ಬಂದಿದ್ದರು, ಸ್ಥಳದಲ್ಲಿ ಪಂಚನಾಮೆ ಮಾಡುವ ಸಲುವಾಗಿ ಪೋಲೀಸರು ನನಗೆ ನಿಪಿ –8 ರಂತೆ ನೋಟೀಸ್ ಕೊಟ್ಟಿರುತ್ತಾರೆ, ನಿಪಿ 8 ಕ್ಕೆ ನಿಪಿ 8(ಸಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ51 ಪ್ರಾ.ಸಾ.8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಚಾಸಾ2 ಮತ್ತು ಆರೋಪಿತರ ನಡುವೆ ಗಲಾಟೆಯಾದ ಹಿನ್ನಲೆಯಲ್ಲಿ ಪೋಲೀಸರು ಚಾಸಾ2 ರವರ ಮನೆಯ ಹತ್ತಿರ ಬಂದಿದ್ದರು, ಚಾಸಾ2 ರವರ ಮನೆಯ ಹಿಂಭಾಗ ಇರುವ ಖಾಲಿ ಜಾಗದಲ್ಲಿ ನನ್ನ ಅತ್ತಿಗೆ ಚಾಸಾ3 ರವರು ಸಗಣಿ ಸಾರಿಸಬೇಕಾದರೆ ಗಲಾಟೆ ಆಗಿರುತ್ತದೆ, ಗಲಾಟೆಯಾದ ಸ್ಥಳವನ್ನು ಪೋಲೀಸರಿಗೆ ಚಾಸಾ2 ರವರು ತೋರಿಸಿರುತ್ತಾರೆ, ಚಾಸಾ2 ರವರು ಕತ್ತಿಯನ್ನು ಪೋಲೀಸರ ಮುಂದೆ ಹಾಜರುಪಡಿಸಿ ಆರೋಪಿತರು ತನಗೆ ಮತ್ತು ತನ್ನ ಮಗನಿಗೆ ಸದರಿ ಕತ್ತಿಯಿಂದ ಹಲ್ಲೆ ಮಾಡಿರುತ್ತಾರೆ ಎಂದು ತಿಳಿಸಿದರು, ಪೋಲೀಸರು

ಸದರಿ ಕತ್ತಿಯನ್ನು ಒಂದು ಬಟ್ಟೆಯಲ್ಲಿ ಹಾಕಿ ಅಮಾನತ್ತುಪಡಿಸಿಕೊಂಡಿರುತ್ತಾರೆ , ಪೋಲೀಸರು ಬೆಳಿಗ್ಗೆ 11 ಗಂಟೆಯಿಂದ 12 ಗಂಟೆ ವರೆಗೆ ನಿಪಿ 5 ರಂತೆ ಮಹಜರ್ ಕ್ರಮ ಜರುಗಿಸಿರುತ್ತಾರೆ, ನಿಪಿ5 ಕ್ಕೆ ನಿಪಿ5(ಸಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 52 ಫ್ರಾ.ಸಾ.8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಪೋಲೀಸರು ಮಹಜರ್ ಮಾಡುವ ಸಮಯದಲ್ಲಿ ನಿಪಿ 6 ಮತ್ತು 7 ರಂತೆ ಫೋಟೋ ತೆಗೆದಿರುತ್ತಾರೆ, ಮು ಮಾ 4 ಆ ದಿವಸ ಚಾಸಾ2 ರವರು ಪೋಲೀಸರಿಗೆ ನೀಡಿದ ಕತ್ತಿಯಾಗಿರುತ್ತದೆ, ಮು ಮಾ 4 ರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ನನ್ನ ಸಹಿ ಇರುತ್ತದೆ, ನಿಪಿ5 ಕ್ಕೆ ನನ್ನ ಜೊತೆ ಚಾಸಾ7 ಮತ್ತು ಚಾಸಾ2 ರವರು ಸಹಿ ಹಾಕಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 53 ಫ್ರಾ.ಸಾ.9 ಚೇತನ್ ಕುಮಾರ್ ಬಿ ರವರು ತಮ್ಮ ಸಾಕ್ಷ್ಯದಲ್ಲಿ – ದಿನಾಂಕಃ 14–03–2022 ರಂದು ಪೋಲೀಸರು ನನ್ನನ್ನು ಸೊರಬ ಪೋಲೀಸ್ ಠಾಣೆಗೆ ಕರೆಸಿದ್ದರು, ನನ್ನ ಜೊತೆ ದಯಾನಂದ ರವರನ್ನು ಪೋಲೀಸ್ ಠಾಣೆಗೆ ಕರೆಸಿದ್ದರು, ಚಾಸಾ1 ರವರು ಪೋಲೀಸರಿಗೆ ಗಲಾಟೆ ಬಗ್ಗೆ ತಿಳಿಸಿದರು, ಪೋಲೀಸರು ನನಗೆ ಮಹಜರ್ ಗೆ ಸಹಕರಿಸಬೇಕು ಎಂದು ನಿಪಿ 2 ರಂತೆ ನೋಟೀಸ್ ನ್ನು ಜಾರಿ ಮಾಡಿರುತ್ತಾರೆ, ನಿಪಿ2 ಕ್ಕೆ

ನಿಪಿ2(ಸಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ54 ಫ್ರಾ.ಸಾ.9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಚಾಸಾ1 ರವರು ಒಂದು ಶರ್ಟ್ ಮತ್ತು ಟೋಪಿಯನ್ನು ಪೋಲೀಸರಿಗೆ ನೀಡಿದರು, ಚಾಸಾ2 ಲೋಕೇಶ ರವರು ಅವರ ಶರ್ಟ್ ನ್ನು ಪೋಲೀಸರಿಗೆ ನೀಡಿರುತ್ತಾರೆ, ಸದರಿ ಶರ್ಟ್ ಮತ್ತು ಟೋಪಿಗೆ ರಕ್ತ ಕಲೆಯಾಗಿತ್ತು, ಚಾಸಾ1 ಮತ್ತು 2 ರವರು ಗಲಾಟೆಯಾದ ಸಮಯದಲ್ಲಿ ಸದರಿ ಬಟ್ಟೆಗಳನ್ನು ಧರಿಸಿದ್ದೆವು ಎಂದು ಹೇಳಿ ಪೋಲೀಸರಿಗೆ ನೀಡಿರುತ್ತಾರೆ, ಪೋಲೀಸರು ಸದರಿ ಬಟ್ಟೆಗಳನ್ನು ಅಮಾನತ್ತುಪಡಿಸಿಕೊಂಡು ಅವುಗಳನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಫೋಟೋಗಳನ್ನು ತೆಗೆದಿರುತ್ತಾರೆ, ಪೋಲೀಸರು ಮದ್ಯಾಹ್ನ 2 ರಿಂದ 3 ಗಂಟೆ ವರೆಗೆ ನಿಪಿ 3 ರಂತೆ ಅಮಾನತ್ತು ಪಂಚನಾಮೆ ಮಾಡಿರುತ್ತಾರೆ, ಅಮಾನತ್ತುಪಂಚನಾಮೆ ದಾಖಲೆಗೆ ನಿಪಿ3(ಸಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ55 ಫ್ರಾ.ಸಾ.9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಿಪಿ 3 ಕ್ಕೆ ನನ್ನ ಜೊತೆ ದಯಾನಂದ , ಮಾಲತೇಶ ಮತ್ತು ಲೋಕೇಶ ಸಹಿ ಹಾಕಿರುತ್ತಾರೆ, ನಿಪಿ –4 ಪಂಚನಾಮೆ ಸಮಯದಲ್ಲಿ ತೆಗೆದ ಫೋಟೋ ಆಗಿರುತ್ತದೆ, ಅದರಲ್ಲಿ ನಾನು ಇರುತ್ತೇನೆ, ಚಾಸಾ1 ಮತ್ತು 2 ರವರು ಹಾಜರುಪಡಿಸಿದ ಬಟ್ಟೆಗಳನ್ನು ಮತ್ತು ಟೋಪಿಯನ್ನು ಮು ಮಾ 1

ರಿಂದ 3 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ56 ಪ್ರಾ.ಸಾ.10 Dr. Chayakumari,RFSL, Davanagere. ರವರು ತಮ್ಮ ಸಾಕ್ಷ್ಯದಲ್ಲಿ –

2. On 25-03-2022, our Office received 4 sealed articles from Shashidhara K.N. - PC 1021 of Soraba Police station, pertaining to Crime No. 31/2022. Our reception section received the said articles and the same was registered as RFSL/BS/170/2022. The said articles were sent to biological section for chemical analysis and for issuance of report. I have received the said articles and scrutinized the seal over the said articles and the same were intact and tallied with the sample seal.

3. After opening the said four sealed articles, I found the following.

a. One Iron Machu
b. One hat
c. One shirt
d. One shirt

4. I subjected the said articles for chemical analysis and microscopic examination. After examination of the said articles, I issued report stating that Items No. 1 to 4 were stained with human blood and Item No.1 and 4 were stained with 'O' group blood and item No. 2 and 3 were stained with 'B' group blood.

5. Now, I see the said report issued by me and the same is marked as Ex.P.9 and the witness signature is marked as Ex.P.9(a) and (b).

6. After examining the articles, I repacked the same, sealed it and forwarded the same to the police along with the sample seal of our Laboratory. Now I see the sample seal issued by me and the same is marked as Ex.P.10 and the witness signature is marked as Ex.P.10(a).

7. Now, I see the four articles examined by me and same are already marked as MO 1 to MO4 ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ57 ಪ್ರಾ.ಸಾ.11 ದೇವರಾಯ, ನಿವೃತ್ತ ಪಿ ಎಸ್ ಐ ರವರು ತಮ್ಮ ಸಾಕ್ಷ್ಯದಲ್ಲಿ – ದಿನಾಂಕಃ 14-03-2022 ರಂದು ಬೆಳಿಗ್ಗೆ 10-00 ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ಮುಂದುವರೆದ ಹೇಳಿಕೆಯನ್ನು ಸ್ವೀಕರಿಸಿ ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಃ 31/2022 ಕಲಂ 504, 506, 323, 324 R/W 34 ಐ ಪಿ ಸಿ ಪ್ರಕರಣದಲ್ಲಿ ಹೆಚ್ಚುವರಿಯಾಗಿ 307 ಐ ಪಿ ಸಿ ಸೇರಿಸಿ ತನಿಖೆಯನ್ನು ಮಾಡಲು ಮಾನ್ಯ ನ್ಯಾಯಾಲಯಕ್ಕೆ ಅನುಮತಿ

ನೀಡುವಂತೆ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 58 ಪ್ರಾ.ಸಾ.11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಚಾಸಾ1 ರವರು ನೀಡಿದ ಮುಂದುವರೆದ ಹೇಳಿಕೆ ದೂರು ನಿಪಿ 11 ಆಗಿದ್ದು , ನಿಪಿ –11 ಕ್ಕೆ ನಿಪಿ –11(ಎ) ರಂತೆ, ನ್ಯಾಯಾಲಯಕ್ಕೆ ನೀಡಿದ ಮನವಿ ಪತ್ರ ನಿಪಿ 12 ಆಗಿದ್ದು ನಿಪಿ –12 ಕ್ಕೆ ನಿಪಿ –12(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ59 ಪ್ರಾ.ಸಾ.11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಅದೇ ದಿನ ಚಾಸಾ1 ಮತ್ತು ಚಾಸಾ–2 ರವರು ಠಾಣೆಗೆ ಹಾಜರಾಗಿ ಘಟನೆ ನಡೆದ ಸಮಯದಲ್ಲಿ ತಾವು ಧರಿಸಿದ್ದ ರಕ್ತ ಕಲೆಯಾಗಿದ್ದ ಬಟ್ಟೆಗಳನ್ನು ನನ್ನ ಮುಂದೆ ಹಾಜರುಪಡಿಸಿದರು, ನಾನು ಪಂಚರಾದ ಚೇತನ್ ಕುಮಾರ್ ಮತ್ತು ದಯಾನಂದರವರಿಗೆ ನಿಪಿ 2 ರಂತೆ ನೋಟೀಸ್ ಅನ್ನು ಜಾರಿ ಮಾಡಿ ಸದರಿ ಬಟ್ಟೆಗಳನ್ನು ಅಮಾನತ್ತು ಪಡಿಸಿಕೊಳ್ಳುವಾಗ ಸಾಕ್ಷಿಯಾಗಿರಬೇಕೆಂದು ಕೋರಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 60 ಫ್ರಾ.ಸಾ.11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಂತರ ಸದರಿ ಪಂಚರ ಸಮಕ್ಷಮ ಚಾಸಾ1 ರವರು ನೀಡಿದ ರಕ್ತ ಕಲೆಯಾಗಿದ್ದ ಬಟ್ಟೆಗಳಾದ 1) ರಕ್ತದ ಕಲೆಯಾಗಿದ್ದ ಬಿಳಿ ಬಣ್ಣದ ಟೋಪಿ, 2) ರಕ್ತ ಕಲೆಯಾಗಿದ್ದ ನೀಲಿ ಕಂದು ಬೂದು ಬಣ್ಣ ಮಿಶ್ರಿತ ತುಂಬು ತೋಳಿನ ಅಂಗಿ , ಮತ್ತು ಚಾಸಾ2 ರವರು ನೀಡಿದ 3) ರಕ್ತದ ಕಲೆವುಳ್ಳ ಆಕಾಶ ನೀಲಿ ಬಣ್ಣದ ಅರ್ಧ ತೋಳಿನ ಅಂಗಿ ಯನ್ನು ಅಮಾನತ್ತುಪಡಿಸಿಕೊಂಡು, ಸದರಿ ಬಟ್ಟೆಗಳನು ಬಿಳಿ ಬಟ್ಟೆಯಲ್ಲಿ ಹಾಕಿ ಎಸ್ ಎಂಬ ಅಕ್ಷರದಿಂದ ಸೀಲ್ ಮಾಡಿ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿರುತ್ತೇನೆ, ನಿಪಿ –2 ಕ್ಕೆ ನಿಪಿ –2(ಡಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ61 ಫ್ರಾ.ಸಾ.11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಿಪಿ 3 ಅಮಾನತ್ತು ಪಂಚನಾಮೆಯನ್ನು ಮಧ್ಯಾಹ್ಷ 2 ರಿಂದ 3 ಗಂಟೆವರೆಗೆ ಮಾಡಿರುತ್ತೇನೆ ಮತ್ತು ಆ ಸಮಯದಲ್ಲಿ ನಿಪಿ 4 ರಂತೆ ಫೋಟೋ ತೆಗೆದಿರುತ್ತೇನೆ, ನಿಪಿ –3 ಕ್ಕೆ ನಿಪಿ–3(ಡಿ) ರಂತೆ ಸಹಿ ಮಾಡಿರುತ್ತೇನೆ, ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಮಾಲುಪಟ್ಟಿ ಸಂಃ22/2022 ರಲ್ಲಿ ಅಳವಡಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ, ಅಮಾನತ್ತುಪಡಿಸಿಕೊಂಡ ಬಟ್ಟೆಗಳನ್ನು ಮು ಮಾ 1 ರಿಂದ ಮು ಮಾ –3 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ62 ಪ್ರಾ.ಸಾ.11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ದಿನಾಂಕಃ 06–03–2022 ರಂದು ಚಾಸಾ2 ರವರ ನಿಪಿ 13 ಗಾಯದ ಪ್ರಮಾಣಪತ್ರವನ್ನು ಸೊರಬ ಸರ್ಕಾರಿ ಆಸ್ಪತ್ರೆಯಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ನಿಪಿ –13 ಕ್ಕೆ ನಿಪಿ – 13(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 63 ಪ್ರಾ.ಸಾ.11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ದಿನಾಂಕಃ 05–06–2022 ರಂದು ಚಾಸಾ1 ರವರ ನಿಪಿ14 ಗಾಯದ ಪ್ರಮಾಣಪತ್ರವನ್ನು ಸೊರಬ ಸರ್ಕಾರಿ ಆಸ್ಪತ್ರೆಯಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ನಿಪಿ –14 ಕ್ಕೆ ನಿಪಿ 14(ಎ) ರಂತೆ ಸ್ವೀಕೃತ ಸಹಿಯನ್ನು ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 64 ಪ್ರಾ.ಸಾ.11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ದಿನಾಂಕಃ 05–07–2022 ರಂದು ಆರ್ ಎಫ್ ಎಸ್ ಎಲ್ ದಾವಣಗೆರೆಯಿಂದ ನಿಪಿ9 ಎಫ್ ಎಸ್ ಎಲ್ ವರದಿ ಬಂದಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ , ನಿಪಿ–9 ಕ್ಕೆ ನಿಪಿ–9(ಸಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 65 ಪ್ರಾ.ಸಾ.11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಾನು ವೈಧ್ಯರ ಮುಂದೆ ಮು ಮಾ –4 ನ್ನು ಹಾಜರುಪಡಿಸಿ ಚಾಸಾ1 ಮತ್ತು ಚಾಸಾ2 ರವರಿಗೆ ಸದರಿ ಆಯುಧದಿಂದ ಹಲ್ಲೆ ಮಾಡಿದರೆ ಗಾಯದ ಪ್ರಮಾಣಪತ್ರಗಳಲ್ಲಿ ಹೇಳಿದ ರೀತಿಯ ಗಾಯಗಳು ಸಂಭವಿಸುತ್ತದೆಯೇ ಎಂದು ಅಭಿಪ್ರಾಯ ನೀಡಿ ಎಂದು ಕೋರಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 66 ಪ್ರಾ.ಸಾ.11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಂತರ ದಿನಾಂಕಃ 13–08–2022 ರಂದು ಸೊರಬ ಸರ್ಕಾರಿ ಆಸ್ಪತ್ರೆಯ ವೈಧ್ಯರು ಮು ಮಾ –4 ರಿಂದ ಹಲ್ಲೆ ಮಾಡಿದರೆ ಗಾಯದ ಪ್ರಮಾಣಪತ್ರದಲ್ಲಿ ಹೇಳಿರುವ ಗಾಯಗಳು ಸಂಭವಿಸುವ ಸಾಧ್ಯತೆ ಇರುತ್ತದೆ ಎಂದು ಅಭಿಪ್ರಾಯವನ್ನು ನಿಪಿ 15 ರಂತೆ ನೀಡಿರುತ್ತಾರೆ, ಅಮಾನತ್ತು ಪಂಚನಾಮೆ ಮಾಡುವ ಸಮಯದಲ್ಲಿ ತೆಗೆದ ಫೋಟೋ ಬಗ್ಗೆ ನಾನು ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ರ ಅಡಿಯಲ್ಲಿ ನಿಪಿ– 16 ರಂತೆ ದೃಢೀಕರಣ ಪತ್ರವನ್ನು ಸಲ್ಲಿಸಿರುತ್ತೇನೆ, ನಿಪಿ –16 ಕ್ಕೆ ನಿಪಿ –16(ಎ) ರಂತೆ ಸಹಿ ಮಾಡಿರುತ್ತೇನೆ, ನಿಪಿ –17 ಫೋಟೋ ಇರುವ ಸಿ ಡಿ ಆಗಿರುತ್ತದೆ ಎಂದು, ಚಾಸಾ–2 ರವರ ಮನೆಯ ನಿಪಿ 18 ಕಂದಾಯ ರಶೀದಿಯನ್ನು ಗ್ರಾಮ ಪಂಚಾಯಿತಿ ಹಳೇಸೊರಬದಿಂದ ಸ್ವೀಕರಿಸಿರುತ್ತೇನೆ,

ನಿಪಿ –18 ಕ್ಕೆ ನಿಪಿ18(ಎ) ರಂತೆ ಸ್ವೀಕೃತ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ67 ಪ್ರಾ.ಸಾ.11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಂತರ ಆರೋಪಿತರ ವಿರುದ್ಧ ಆರೋಪ ಸಾಭೀತಾದ ಕಾರಣ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 68 ಪ್ರಾ.ಸಾ.12 Dr. Shwetha, Senior Specialist in General Hospital, Soraba ರವರು ತಮ್ಮ ಸಾಕ್ಷ್ಯದಲ್ಲಿ –

2. On 06-03-2022 at about 5.00 p.m. a patient by name Lokesha S/o. Bangarappa, aged about 60 years, R/o. Yalasi , Soraba taluk was brought to the Soraba Government Hospital with the alleged history of assault. On examining the said Lokesha, I found the following injuries on him:

A cut lacerated wound of 1 cm X 1cm on left side of mastoid process.

A curvilineal Abrasion of 8 cms over left shoulder joint.

3. The above said injuries are simple in nature. I have issued the wound certificate regarding the same. Now, I see the

wound certificate and the same is already marked as Ex.P13, the witness signature is marked as Ex.P13(b).

4. On the same day, at the same time the another patient by name Malathesh S/o. Lokesh, aged about 29 years, R/o. Yalasi , Soraba taluk was brought to the Soraba Government Hospital with the alleged history of assault. On examining the said Malathesh, I found the following injuries on him:

1. A cut lacerated wound on left side of frontal area vertically of 7 X 1 cm.

5. The above said injuries are simple in nature. I have issued the wound certificate regarding the same. Now, I see the wound certificate and the same is already marked as Ex.P14, the witness signature is marked as Ex.P14(b).

6. On 23.08.2022, the Soraba Police submitted one sickle – Kandli made of Iron curved tip, small chop of piece in tip having wooden handle fist size and sought opinion regarding occurence of the nature of the injury by using said weapon. After examining the said weapon, I issued the opinion stating that the said weapon can caused the injuries mentioned in the wound certificate when hit with force. Now, I see the opinion issued by me and same is already marked as Ex.P15 and the witness signature is marked as Ex.P15(a). I can identify the sickle examined by me and now, I see the same before the court. The sickle is already marked as MO 4. The blood group of the Lokesh and Malathesh was tested in our Hospital and the blood group

report given the Soraba Police. Now, I see the said blood group reports of Lokesh and Malathesh and the same are marked as Ex.P19 and Ex.P20 and the witness signatures are marked as Ex.P19(a) and Ex.P20(a).

ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ69 ಪ್ರಾ.ಸಾ.13 ಮಹೇಶ್ ಟಿ , ಮುಖ್ಯ ಪೇದೆ ರವರು ತಮ್ಮ ಸಾಕ್ಷ್ಯದಲ್ಲಿ – ದಿನಾಂಕಃ 06–03–2022 ರಂದು ಸೊರಬ ಸರ್ಕಾರಿ ಆಸ್ಪತ್ರೆಯಿಂದ ಚಾಸಾ1 ರವರಿಗೆ ಹಲ್ಲೆಯಾಗಿ ಗಾಯ ಆಗಿ ಚಿಕಿತ್ಸೆ ಪಡೆಯುತ್ತಿರುವ ಬಗ್ಗೆ ನಿಪಿ –21 ರಂತೆ ಎಂ ಎಲ್ ಸಿ ಬಂದಿತ್ತು, ಆಗ ನಾನು ಸೊರಬ ಸರ್ಕಾರಿ ಆಸ್ಪತ್ರೆಗೆ ಹೋಗಿ, ಚಾಸಾ1 ರವರ ಹೇಳಿಕೆಯನ್ನು ನಿಪಿ –1 ರಂತೆ ವೈಧ್ಯರ ಸಮಕ್ಷಮ ಪಡೆದುಕೊಂಡಿರುತ್ತೇನೆ, ನಿಪಿ –1 ಕ್ಕೆ ನಿಪಿ 1(ಬಿ) ರಂತೆ ಸಹಿ ಮಾಡಿರುತ್ತೇನೆಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 70 ಪ್ರಾ.ಸಾ.13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಂತರ ನಾನು ಚಾಸಾ1 ರವರು ನೀಡಿದ ಹೇಳಿಕೆಯನ್ನು ಠಾಣೆಗೆ ತೆಗೆದುಕೊಂಡು ಬಂದು ಠಾಣಾ ಮೊಕದ್ದಮೆ ಸಂಃ31/2022 ರಲ್ಲಿ ಪ್ರಕರಣ ದಾಖಲಿಸಿಕೊಂಡು ನಿಪಿ 22 ರಂತೆ ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಹಿರಿಯ ಅಧಿಕಾರಿಗಳಿಗೆ ನಿವೇಧಿಸಿಕೊಂಡಿರುತ್ತೇನೆ,

ನಿಪಿ –22, ಕ್ಕೆ ನಿಪಿ –22(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 71 ಪ್ರಾ.ಸಾ.13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ದಿನಾಂಕಃ 07–03–2022 ರಂದು ಸ್ಥಳ ಪಂಚನಾಮೆ ಮಾಡಲು ಘಟನಾ ಸ್ಥಳವಾದ ಯಲಸಿ ಗ್ರಾಮದಲ್ಲಿರುವ ಚಾಸಾ1 ರವರ ಮನೆಯ ಹತ್ತಿರ ಹೋಗಿರುತ್ತೇನೆ, ಸ್ಥಳ ಪಂಚನಾಮೆ ಮಾಡಲು ಸಾಕ್ಷಿದಾರರಾದ ಚಾಸಾ2 ಮತ್ತು ಚಾಸಾ7 ಮತ್ತು 8 ರವರಿಗೆ ನಿಪಿ 8 ರಂತೆ ನೋಟೀಸ್ ನ್ನು ಜಾರಿ ಮಾಡಿರುತ್ತೇನೆ, ನಿಪಿ –8 ಕ್ಕೆ ನಿಪಿ 8(ಡಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ72 ಪ್ರಾ.ಸಾ.13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಂತರ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ2 ಲೋಕೇಶ್ ರವರು ಸ್ಥಳವನ್ನು ತೋರಿಸಿ ಇದೇ ಸ್ಥಳದಲ್ಲಿ ಆರೋಪಿತರು ಚಾಸಾ1 ಮಾಲತೇಶನಿಗೆ ಮತ್ತು ತನಗೆ ಹಲ್ಲೆ ಮಾಡಿದ ಸ್ಥಳ ಎಂದು ತೋರಿಸಿದ ಮೇರೆಗೆ ನಾನು ಸದರಿ ಸ್ಥಳವನ್ನು ಪರಿಶೀಲನೆ ಮಾಡಿ ನಿಪಿ –5 ರಂತೆ ಸ್ಥಳ ಪಂಚನಾಮೆ ಮಾಡಿರುತ್ತೇನೆ, ನಿಪಿ –5 ಕ್ಕೆ ನಿಪಿ 5(ಡಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ73 ಪ್ರಾ.ಸಾ.13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಸ್ಥಳ ಪಂಚನಾಮೆಯನ್ನು ಬೆಳಿಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 12–00 ಗಂಟೆವರೆಗೆ ಮಾಡಿರುತ್ತೇನೆ, ಸ್ಥಳ ಪಂಚನಾಮೆ ಸಮಯದಲ್ಲಿ ಸ್ಥಳದಲ್ಲಿ ಬಿದ್ದಿದ್ದ ಕಂದ್ಲಿಯನ್ನು ಚಾಸಾ2 ರವರು ತೆಗೆದು ನನ್ನ ಮುಂದೆ ಹಾಜರುಪಡಿಸಿ ಸದರಿ ಕಂದ್ಲಿಯಿಂದ ಆರೋಪಿತರು ತನಗೆ ಮತ್ತು ಚಾಸಾ1 ರವರಿಗೆ ಹಲ್ಲೆ ಮಾಡಿರುತ್ತಾರೆ ಎಂದು ತಿಳಿಸಿದ ಮೇರೆಗೆ ನಾನು ಸದರಿ ಕಂದ್ಲಿಯನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ, ಕೃತ್ಯ ನಡೆದ ಸ್ಥಳದಲ್ಲಿ ನಿಪಿ 23 ರಂತೆ ನಕಾಶೆಯನ್ನು ತಯಾರು ಮಾಡಿರುತ್ತೇನೆ, ನಿಪಿ –23 ಕ್ಕೆ ನಿಪಿ 23(ಎ) ರಂತೆ ಸಹಿ ಮಾಡಿರುತ್ತೇನೆ, ಸ್ಥಳ ಪಂಚನಾಮೆ ಸಮಯದಲ್ಲಿ ನಿಪಿ 6 ಮತ್ತು 7 ರಂತೆ ಫೋಟೋಗಳನ್ನು ತೆಗೆಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ74 ಪ್ರಾ.ಸಾ.13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಂತರ ಪ್ರತ್ಯಕ್ಷ ಸಾಕ್ಷಿಗಳಾದ ಚಾಸಾ–2 ಲೋಕೇಶ, ಚಾಸಾ– 6 ಪರಮೇಶ್ವರಪ್ಪ, ಚಾಸಾ–3 ಮಂಜುಳಾ, ಚಾಸಾ–4 ಶ್ರೀಧರ, ಚಾಸಾ–5 ಕನ್ನಪ್ಪ ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ, ನಂತರ ಠಾಣೆಗೆ ಬಂದು ಅಮಾನತ್ತು ಪಡಿಸಿಕೊಂಡ ಮು ಮಾ –4 ಕಂದ್ಲಿಯನ್ನು ಠಾಣಾ ಮಾಲು ಪಟ್ಟಿ ಸಂಃ19/2022 ರಲ್ಲಿ ಅಳವಡಿಸಿಕೊಂಡಿರುತ್ತೇನೆ, ಮು ಮಾ –4 ಕಂದ್ಲಿ ನಾನು ಅಮಾನತ್ತುಪಡಿಸಿಕೊಂಡ ಕಂದ್ಲಿಯಾಗಿರುತ್ತದೆ, ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ–14

ದೇವರಾಯರವರಿಗೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ75 ನಿಮ್ಮ ಪರ ಸಾಕ್ಷಿಗಳು ಇದ್ದಾರೆಯೇ ?

ಉತ್ತರ :

ಪ್ರಶ್ನೆ: 76 ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉತ್ತರ

ಆರೋಪಿತನಿಗೆ ಮೇಲ್ಕಂಡ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ನುಡಿದಂತೆ ಉತ್ತರವನ್ನು ನನ್ನ ಹಸ್ತಾಕ್ಷರದಲ್ಲಿ ಪಡೆದಿರುತ್ತೇನೆ.

ದಿನಾಂಕಃ 12 ನೇ ಮಾರ್ಚ್, 2026 ನೇ ಇಸವಿ.

**(ರವೀಂದ್ರ ಆರ್.)**
**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಶಿವಮೊಗ್ಗ (ಪಿಠಾಸೀನ ಸಾಗರ).**